ಬೆಳೆಯುತ್ತಲೇ ಇರುತ್ತದೆ. ಒಂದು ಗಾಡಿ ತೆಗೆದುಕೊಂಡು ಸುತ್ತಬಹುದು ಎಂದರೂ 'ಸಾಗುವ ಪ್ರಯಾಣ ಮುಖ್ಯವಲ್ಲದೆ ಗುರಿಯಲ್ಲ' ಎಂಬ ನಾಣ್ಣುಡಿಯಂತೆ ಬಸ್ಸು ನೇರ ಹೋಗಿದ್ದರೆ ಬೇಗ ತಲುಪಬಹುದಾದರೂ ಅದು ಅದರದೇ ಮಾರ್ಗದಲ್ಲಿ ಸುತ್ತಿ ಬಳಸಿ ಎಲ್ಲರನ್ನು ಹತ್ತಿಸಿಕೊಂಡು ಚಲಿಸುತ್ತದೆ. 'ನಿಧಾನವಾಗಿ ಚಲಿಸಿದರೂ ಎಲ್ಲರ ಜೊತೆಗೆ ಚಲಿಸುವುದು ಮುಖ್ಯ' ಎಂಬ ಜೀವನಪಾಠವನ್ನು ಬಸ್ಸು ನಮಗೆ ಕಾಣಿಸುತ್ತದೆ.

ಬಸ್ಸಿನ ಪ್ರಯಾಣದಲ್ಲಿ ಎಲ್ಲರ ತಲೆಯೊಳಗೂ ಒಂದೊಂದು ಲಹರಿ. ಕನಸು, ನಿರಾಸೆ, ದುರಾಸೆ, ಪರೀಕ್ಷಾ ಭಯ, ಭವಿಷ್ಯದ ಚಿಂತೆ, ಪ್ರೇಮ ಫಲಿಸುತ್ತದೋ ಇಲ್ಲವೋ ಎಂಬ ಚಡಪಡಿಕೆ, ಮುಂದಿನ ತಿಂಗಳ ಬ್ಯಾಂಕ್ ಸಾಲವನ್ನು ಸರಿಯಾದ ಸಮಯಕ್ಕೆ ಕಟ್ಟಲಾದೀತೋ ಇಲ್ಲವೋ ಎಂಬ ಅವ್ಯಕ್ತ ಭಯ ಎಲ್ಲವೂ ಸೇರಿರುತ್ತದೆ. ಈ ಎಲ್ಲರ ಭಾವಗಳನ್ನು ಬಸ್ಸಿನಲ್ಲಿದ್ದಷ್ಟೂ ಹೊತ್ತು ಬೆಚ್ಚಗೆ ಸಲಹುವ ಬೇಸಿಗೆ ರಜೆಗಳ ಆಯಿಯಂತೆ ನನಗೆ ಬಸ್ಸು ಕಾಣಿಸುತ್ತದೆ. ಇದೇ ಬಸ್ಸುಗಳ ಸಂದಣಿ ಹೆಚ್ಚಾಗಿ ಜನರನ್ನು ಮೊಪೆಡ್ ಕೋಳಿಗಳ ತರ ತುಂಬಿಕೊಂಡು ಹೋಗುವಾಗ 'ಹಡಸಿ ಮಗಂದು! ಇದ್ರ ಸಾವಾಸನೆ ಸಾಕು. ಇ ಎಂ ಐ ಒಳಗೊಂದು ಬೈಕ್ ತಗಂಡರೆ ಸರಿ!' ಎನ್ನುವ ಬೈಗುಳಕ್ಕೂ ಬಸ್ಸು ತನ್ನನ್ನು ತಾನು ಒಡ್ಡಿಕೊಳ್ಳುತ್ತದೆ.

ಬಸ್ಸು ಎಲ್ಲರ ಕುತ್ತಿಗೆ ಕಂಕುಳ ಅಂಗಿಯ ದುಡಿಮೆಯ ಬೆವರಿನ ಪರ್ಫ್ಯೂಮಿನ ಪರಿಮಳಗಳೆಲ್ಲಾ ಕಲೆತುಹೋದ ವಾಸನಾ ಪ್ರಪಂಚದಂತೆ ನನಗೆ ಕಾಣುತ್ತದೆ. ಕೆಲವೊಮ್ಮೆ ಇದೆ ಸಂದರ್ಭವನ್ನು ಬಳಸಿ ಅನುಮತಿಯಿಲ್ಲದೆ ಅನುಚಿತವಾಗಿ ಅಸಹ್ಯವಾಗಿ ಉಜ್ಜಾಡುವ ಕಾಮುಕ ಕಿಲಾಡಿವೀರರು ಸಿಕ್ಕಂತೆಯೇ ಅದಕ್ಕೆ ಪ್ರತ್ಯುತ್ತರವಾಗಿ ಕಪಾಳಮೋಕ್ಷ ಮಾಡುವ ಆರಕ್ಷಕ ಠಾಣೆಗೆ ಕೊರಳ ಪಟ್ಟಿ ಹಿಡಿದು ಎಳೆದೊಯ್ಯುವ ಕಾಳಿ ಮಾತೆಯರೂ ಸಿಗುತ್ತಾರೆ.

ಬಸ್ಸು ಸುಸ್ತಾದಾಗ ಮಾತ್ರ ಸುಧಾರಿಸಿಕೊಳ್ಳಲು ನಿಂತು ಮತ್ತೆ ಚಲಿಸುವ ಜಂಗಮಜೋಗಿಯಂತೆ ಕಂಡರೆ, ರಾತ್ರಿ ಹೊತ್ತಿನ ಬಸ್ ಸ್ಟ್ಯಾಂಡು ಕಪ್ಪುನೆರಳು ಮತ್ತು ನಿಯಾನ್ ದೀಪದ ಹಳದಿ ಬೆಳಕು; ಚಿತ್ರ ಕಲಕಿದ ಹರಿಣದ ಮೈಯಚಿತ್ತಾರದಂತೆ ಗೋಚರಿಸುತ್ತದೆ. ಒಮ್ಮೊಮ್ಮೆ ಬಸ್ಸಿನ ಕಿಟಕಿಯ ಬದಿಯ ಸೀಟು ಪ್ರಯಾಣಿಕನಿಗಾಗಿ ಕಾದು ಕುಳಿತ ಪ್ರೇಮಿಯಂತೆ ಕಾಣುತ್ತದೆ. ಸಾಗುವ ಹಳೆ ಬಸ್ಸಿನಲ್ಲಂತೂ ಸವೆದ ಗಾಜುಗಳು ಹೊರಡಿಸುವ ಡಗಡಗ ಸದ್ದು ಜೀವನದ ರಸಿಕಸಿಯ ಇರುವಿನ ಸದಾ ಜೀವಂತ ಶೃತಿಯಂತೆ ಕೇಳಿಸುತ್ತದೆ. ಬಸ್ಸು ಚಲನಶೀಲತೆಯ ಸಂಕೇತವಾಗಿಯೂ, ಕನಸುವ ಜಾಗವಾಗಿಯೂ, ಯಾರಿಲ್ಲದಿದ್ದರೂ ನಾನಿದ್ದೇನೆ ಎಂದು ಪೊರೆಯುವ ತಾಯಿಯಾಗಿಯೂ ಅಭಯಹಸ್ತ ನೀಡುತ್ತದೆ.

ಈಗ ಬಸ್ಸುಗಳಲ್ಲಿಯೂ ಟಿಕೇಟು ತೆಗೆಯಲು, ಪಾಸ್ ಮಾಡಿಸಿಕೊಳ್ಳಲು, ವಾಹನದ ಬಾಗಿಲು ತೆಗೆಯಲು ಕ್ಯೂ ಆರ್ ಕೋಡುಗಳು ಬಂದಿವೆ. ಬೆಂಗಳೂರಿನಂತ ಶಹರದಲ್ಲಿ ವಜ್ರದಂತಹ ಎ.ಸಿ ಬಸ್ಸು, ಎಲೆಕ್ಟ್ರಿಕ್ ಬಸ್ಸುಗಳು ಬಂದಿವೆ. ಮುಂದೊಮ್ಮೆ ಎಲ್ಲವೂ ಹವಾನಿಯಂತ್ರಿತ ಬಸ್ಸುಗಳಾಗಿ ಕೆಂಬನಿಯ ಕೆಂಪು ಬಸ್ಸುಗಳ ಅವಸಾನವಾಗಿಬಿಟ್ಟರೆ? ನಮ್ಮೆಲ್ಲರಿಗೂ ನೆರಳು ಕೊಟ್ಟ ಊರ ಗುರುತಿನ ಮರ ಧೊಪ್ ಎಂದು ನೆಲಕ್ಕೆ ಉರುಳಿದ ಹಾಗಿನ ಆಘಾತವನ್ನೇ ತರುತ್ತದೇನೋ! ಶೇಷವಾಗುವುದೇ ನೆನಪಿನಲ್ಲಿ ಶಾಶ್ವತವಾಗಿ ಉಳಿದುಬಿಡುತ್ತದಲ್ಲ... ಹಾಗೆಯೇ ಇದೂ ಕೂಡ ಇರಬೇಕು. ಈ ಅಭಿವೃದ್ಧಿ ಎನ್ನುವ ರಕ್ಕಸನಿಗೆ ತನ್ನ ಕಂದನನ್ನೇ ನುಂಗಿ ನೀರು ಕುಡಿಯುವ ಗ್ರೀಕ್ ಪುರಾಣದ ಕಾಲನ ಬುದ್ಧಿ!!

ಬಹುಪಾಲು ತೆರೆದೇ ಇರುವ ಸಿಟಿ ಬಸ್ಸುಗಳ ಬಾಗಿಲುಗಳು ಎಲ್ಲರಿಗೂ ಪ್ರವೇಶವಿರುವ ದೇಗುಲ, ಮಸೀದಿ ಮುಂತಾದ ಧಾರ್ಮಿಕ ಕೇಂದ್ರಗಳ ಕನಸಿನಂತೆ, ಬಾಯಿಮಾತಿನ ಸೇವೆಯಲ್ಲದೆ ಅವಕಾಶದ ಬಾಗಿಲುಗಳನ್ನು ಸದಾ ತೆರೆದೇ ಇಟ್ಟಿರುವ ಒಂದು ಯುಟೋಪಿಯನ್ ಪೊಲಿಟಿಕಲ್ ವ್ಯವಸ್ಥೆಯ ಸಾಕಾರರೂಪಿ ಕಾವ್ಯಪ್ರತಿಮೆಯಂತೆ ಕಾಣುತ್ತದೆ. ಬಸ್ಸು ಏನೆಲ್ಲಾ ಆದರೂ ಕಟ್ಟಕಡೆಯ ಬಡವನ ಕೈಗೆಟುಕುವ ನಕ್ಷತ್ರವಾಗಿಯೂ, ಬಡವರ ವಿಮಾನವಾಗಿಯೂ, ಏನೆಲ್ಲಾ ಕನಸು ಕಟ್ಟುವ ತಾಣವಾಗಿಯೂ, ಬದುಕನ್ನು ಸಂಭಾಳಿಸುವ ತಾಕತ್ತು ಕೊಡುವ ಶಕ್ತಿಕೇಂದ್ರವಾಗಿಯೂ ಬಸ್ಸು ನಮ್ಮೆಲ್ಲರ ಜೀವವೂ ನಮ್ಮದೇ ಒಂದು ಭಾಗವೂ ಆಗುತ್ತದೆ. ಬಸ್ಸು ಬದುಕಿನಲ್ಲಿ ಬಸವಳಿಯದೆ ನಡೆಯುವುದಕ್ಕೆ ಜೀವಂತ ಸಾಕ್ಷಿಯಾಗಿ ಚಲಿಸುತ್ತಲೇ ಇರುತ್ತದೆ... ●